# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ:18/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂನಲ್ಲಿರುವ ಹಳೆಯ ಮಾರುಕಟ್ಟೆಯು ಶಿಥಿಲಾವಸ್ಥೆಯಲ್ಲಿ ಇರುತ್ತದೆ. ಸದರಿ ಪ್ರದೇಶವು ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶವಾಗಿದ್ದು 6522.02 ಚ.ಮೀ ವಿಸ್ತೀರ್ಣವಿರುತ್ತದೆ. ಹಾಲಿ ಮಾರುಕಟ್ಟೆ ಸಂಕೀರ್ಣದಲ್ಲಿ ಸುಮಾರು 144 ಅಂಗಡಿ ಮಳಿಗೆಗಳು ಇರುವುದಾಗಿ ಸಹಾಯ ಕಂದಾಯ ಅಧಿಕಾರಿಗಳು (ಮಾರುಕಟ್ಟೆ) ರವರು ವರದಿ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಹೂವು, ಹಣ್ಣು ಮತ್ತು ಇತರೆ ವ್ಯಾಪಾರದ ಮಳಿಗೆಗಳು ಇದ್ದು, ಸದರಿ ಸ್ಥಳದ ಸುತ್ತಮುತ್ತಲಿನ ಪ್ರದೇಶದಲ್ಲಿ ಸೂಕ್ತ ಮಾರುಕಟ್ಟೆ ಇಲ್ಲದಿರುವುದರಿಂದ, ಇಲ್ಲಿನ ನಿವಾಸಿಗಳ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು, ಸದರಿ ಸ್ಥಳದಲ್ಲಿ ಸುಸಜ್ಜಿತ ಮಾರುಕಟ್ಟೆ, ವಾಣಿಜ್ಯ ಸಂಕೀರ್ಣ ಹಾಗೂ ವಾಹನ ನಿಲುಗಡೆಯ ಅವಶ್ಯಕತೆ ಇರುತ್ತದೆ. ಸದರಿ ಸ್ಥಳದಲ್ಲಿ ತರಕಾರಿ, ಹಣ್ಣು ಮತ್ತು ಇತರೆ ವಸ್ತುಗಳ ಸುಸುಜ್ಜಿತ ಆಧುನಿಕ ಮಾರುಕಟ್ಟೆ, ವಾಹನ ನಿಲುಗಡೆಗಾಗಿ ತಳ ಮಹಡಿಗಳು ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಮಾನ್ಯ ಆಯುಕ್ತರು ಆದೇಶ ನೀಡಿರುತ್ತಾರೆ. ಈ ಮೇರೆಗೆ ಸದರಿ ಮಾರುಕಟ್ಟೆ ನಿರ್ಮಾಣದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ಮೆ॥ ಆರ್ಚ್ ಪ್ಲಾನ್ ರವರಿಗೆ ವಹಿಸಿದ್ದು, ದಿನಾಂಕ:18/12/2009 ರಂದು ಮಾನ್ಯ ಆಯುಕ್ತರು, ವಿಶೇಷ ಆಯುಕ್ತರು (ಯೋಜನೆ), ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು (ಮಾರುಕಟ್ಟೆ), ಜಂಟಿ ಆಯುಕ್ತರು (ಮಾರುಕಟ್ಟೆ) ಹಾಗೂ ಪಾಲಿಕೆಯ ಅಧಿಕಾರಿಗಳ ಸಮ್ಮುಖದಲ್ಲಿ ಮೆ॥ ಆರ್ಚ್ ಪ್ಲಾನ್ ರವರು Power point presentation ಅನ್ನು ಪ್ರಸ್ತುತ ಪಡಿಸಿ, ಸದರಿ ಯೋಜನೆಗೆ ಲೋಕೋಪಯೋಗಿ ಇಲಾಖೆಯ 2009–10ನೇ ಸಾಲಿನ ದರಪಟ್ಟಿಯನ್ನು ಆಧರಿಸಿ ಅಂದಾಜು ಪಟ್ಟಿಯನ್ನು ರೂ.7630 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಅನುವು ಮಾಡಲಾಗಿದೆ.

ಈ ಯೋಜನೆಯಲ್ಲಿ ಹಾಲಿ ಇರುವ ಹಳೇಯ ಮಾರುಕಟ್ಟೆ ಕಟ್ಟಡವನ್ನು ಒಡೆದು ಹಾಕಿ ಆಧುನಿಕ ರೀತಿಯ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಿಲಾಗಿದ್ದು, ತಳಮಹಡಿ–1, ತಳಮಹಡಿ–2, ನೆಲ ಅಂತಸ್ತು, ಮೊದಲನೇ ಅಂತಸ್ತು, ಎರಡನೇ ಅಂತಸ್ತು, ಮೂರನೇ ಅಂತಸ್ತು, ನಾಲ್ಕನೇ ಅಂತಸ್ತು, ಐದನೇ ಅಂತಸ್ತು, ಆರನೇ ಅಂತಸ್ತು ಹಾಗೂ ಬಹುಮಹಡಿ ವಾಹನ ನಿಲ್ದಾಣ–1, ಬಹುಮಹಡಿ ವಾಹನ ನಿಲ್ದಾಣ–2 ಅಂತಸ್ತುಗಳ ಒಟ್ಟು 14,352.89 ಚ.ಮೀ ವಿಸ್ತೀರ್ಣದ ಕಟ್ಟಡವನ್ನು ನಿರ್ಮಿಸಲು ಅನುವು ಮಾಡಿಕೊಳ್ಳಲಾಗಿದೆ. ತಳಮಹಡಿ–1 ರ ವಿಸ್ತೀರ್ಣ 5730 ಚ.ಮೀ ಇದ್ದು, 118 ಕಾರುಗಳ ನಿಲುಗಡೆಗೆ ಹಾಗೂ 192 ದ್ವಿಚಕ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ತಳಮಹಡಿ–2 ರ ವಿಸ್ತೀರ್ಣ 5730.ಚ.ಮೀ ಇದ್ದು, 116 ಕಾರುಗಳ ನಿಲುಗಡೆಗೆ ಹಾಗೂ 195 ದ್ವಿಚಕ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗದೆ ನೆಲ ಅಂತಸ್ತಿನ ವಿಸ್ತೀರ್ಣ 2468.35 ಚ.ಮೀ ಇದ್ದು ,158 ಅಂಗಡಿಗಳು ಹಾಗೂ ದ್ವಿಚಕ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಮೊದಲನೇ ಅಂತಸ್ತಿನ ವಿಸ್ತೀರ್ಣ 2159.11ಚ.ಮೀ ಇದ್ದು, 7 ಅಂಗಡಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಎರಡನೇಯ, ಮೂರನೇಯ ಹಾಗೂ ನಾಲ್ಕನೇಯ ಅಂತಸ್ತುಗಳ ವಿಸ್ತೀರ್ಣ ಪ್ರತಿ ಮಹಡಿಗೆ 2272.3 ಚ.ಮೀ ಆಗಿದ್ದು, ಈ ಮೂರು ಮಹಡಿಯಲ್ಲಿ ತಲಾ ಆರು ಅಂಗಡಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಐದನೇ ಮಹಡಿಯ ವಿಸ್ತೀರ್ಣ 2334.1 ಚ.ಮೀ ವಿಸ್ತೀರ್ಣ ಇದ್ದು, ಉಪಹಾರ ಗೃಹಕ್ಕಾಗಿ ಅನುವು ಮಾಡಲಾಗಿದೆ. ಆರನೇ ಮಹಡಿಯ ವಿಸ್ತೀರ್ಣ 573.43 ಚ.ಮೀ ಇದ್ದು, ಉಪಹಾರ ಗೃಹಕ್ಕಾಗಿ ಅನುವು

ಮಾಡಲಾಗಿದೆ. ಬಹುಮಹಡಿ ವಾಹನ ನಿಲ್ದಾಣ-1 ರ ವಿಸ್ತೀರ್ಣ 158.77 ಚ.ಮೀ ಇದ್ದು, 70 ಕಾರುಗಳ ನಿಲುಗಡೆಗೆ ಅನುವು ಮಾಡಲಾಗಿದೆ. ಬಹುಮಹಡಿ ವಾಹನ ನಿಲ್ದಾಣ-2 ರ ವಿಸ್ತೀರ್ಣ 158.77 ಚ.ಮೀ. ಇದ್ದು 72 ಕಾರುಗಳ ನಿಲುಗಡೆಗೆ ಅನುವು ಮಾಡಲಾಗಿಸದಸು, ಸದರಿ ವಾಣಿಜ್ಯ ಸಂಕೀರ್ಣ ಕಟ್ಟಡದ ವಿಸ್ತೀರ್ಣಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಮಹಡಿಗಳು | ನಿರ್ಮಿತ ಕಟ್ಟಡ ವಿಸ್ತೀರ್ಣ ಚ.ಮೀ.ಗಳಲ್ಲಿ | ಪ್ರಸ್ತಾವನೆ | ಷರಾ |
|---|---|---|---|---|
| 1 | ತಳ ಮಹಡಿ-1 | 5730.00 | ಕಾರು ನಿಲುಗಡೆ-118 ಸಂಖ್ಯೆ<br>ದ್ವಿಚಕ್ರ ವಾಹನ ನಿಲುಗಡೆ-192 ಸಂಖ್ಯೆ | ಹೊಸ ಸೌಲಭ್ಯ |
| 2 | ತಳ ಮಹಡಿ-2 | 5730.00 | ಕಾರು ನಿಲುಗಡೆ-116 ಸಂಖ್ಯೆ<br>ದ್ವಿಚಕ್ರ ವಾಹನ ನಿಲುಗಡೆ-195 ಸಂಖ್ಯೆ | ಹೊಸ ಸೌಲಭ್ಯ |
| 3 | ನೆಲಮಹಡಿ | 2468.35 | ಮಳಿಗೆಗಳು-158<br>ದ್ವಿಚಕ್ರ ವಾಹನಗಳು (ಸರ್ ಪೇಸ್ ಪಾರ್ಕಿಂಗ್) 135 | ಹೊಸ ಸೌಲಭ್ಯ |
| 4 | 1ನೇ ಮಹಡಿ | 2159.11 | ಮಳಿಗೆಗಳು-7 | ಹೊಸ ಸೌಲಭ್ಯ |
| 5 | 2ನೇ ಮಹಡಿ | 2272.3 | ಮಳಿಗೆಗಳು-6 | ಹೊಸ ಸೌಲಭ್ಯ |
| 6 | 3ನೇ ಮಹಡಿ | 2272.3 | ಮಳಿಗೆಗಳು-6 | ಹೊಸ ಸೌಲಭ್ಯ |
| 7 | 4ನೇ ಮಹಡಿ | 2272.3 | ಮಳಿಗೆಗಳು-6 | ಹೊಸ ಸೌಲಭ್ಯ |
| 8 | 5ನೇ ಮಹಡಿ | 2334.1 | ಫುಡ್ ಕೋರ್ಟ್- 500 ಕಾರುಗಳ ನಿಲುಗಡೆ | ಹೊಸ ಸೌಲಭ್ಯ |
| 9 | 6ನೇ ಮಹಡಿ | 573.43 | ಫುಡ್ ಕೋರ್ಟ್- 45 ಕಾರುಗಳ ನಿಲುಗಡೆ | ಹೊಸ ಸೌಲಭ್ಯ |
| 10 | ಬಹುಮಹಡಿ ವಾಹನ ನಿಲುಗಡೆ-1 | 158.77 | 70 ಕಾರುಗಳ ನಿಲುಗಡೆ | ಹೊಸ ಸೌಲಭ್ಯ |
| 11 | ಬಹುಮಹಡಿ ವಾಹನ ನಿಲುಗಡೆ-2 | 158.77 | 70 ಕಾರುಗಳ ನಿಲುಗಡೆ | ಹೊಸ ಸೌಲಭ್ಯ |
| ಒಟ್ಟು ನಿರ್ಮಿತ ಕಟ್ಟಡ ವಿಸ್ತೀರ್ಣ 14,352.89 ಚ.ಮೀ | | | | |

## <u>ಕಟ್ಟಡ ಉಪವಿಧಿಗಳು ಹಾಗೂ ವಲಯ ನಿಯಮಾವಳಿಯಂತೆ ವಿವರಗಳು:</u>

ನಿವೇಶನದ ವಿಸ್ತೀರ್ಣ : 6522.02 ಚದರ ಮೀ.

ವಲಯ ನಿಯಮಾವಳಿಯಂತೆ ಅನುಪಾತ : 2.25

ಉಪಯೋಗಿಸುವ ಅನುಪಾತ : 2.25

ವಲಯ ನಿಯಮಾವಳಿಯಂತೆ ಕಟ್ಟಡದ ಅವರಿಸುವಿಕೆ : 50%

ಉಪಯೋಗಿಸಿರುವ ಕಟ್ಟಡದ ಅವರಿಸುವಕೆ : 50%

ಸದರಿ ವಾಣಿಜ್ಯ ಸಂಕೀರ್ಣ ನಿರ್ಮಾಣದಿಂದ ಸುಮಾರು 12 ವರ್ಷಗಳಲ್ಲಿ ವೆಚ್ಚಗಳನ್ನು ಹೊರತುಪಡಿಸಿ, ಪಾಲಿಕೆಗೆ ನಿವ್ವಳ ಆದಾಯ ಸುಮಾರು ರೂ.7717.51 ಲಕ್ಷಗಳು ಬರಬಹುದೆಂದು ಅಂದಾಜಿಸಲಾಗಿದ್ದು, ಇದರಿಂದಾಗಿ ನಿರ್ಮಾಣದ ವೆಚ್ಚವು ಮರು ಪಾವತಿಯಾಗಬಹುದೆಂದು ಅಭಿಪ್ರಾಯಿಸಲಾಗಿದೆ. ಸದರಿ ಕಾಮಗಾರಿಗೆ 2009–10ನೇ ಸಾಲಿನ ಆಯವ್ಯಯದಲ್ಲಿ ಒಂದು ಲಕ್ಷಗಳ ಅನುದಾನ ಲಭಿದ್ದು, 2010–11ನೇ ಸಾಲಿನಲ್ಲಿ ರೂ.3800 ಲಕ್ಷಗಳನ್ನು ಹಾಗೂ 2011–12ನೇ ಸಾಲಿನಲ್ಲಿ ರೂ.3830 ಲಕ್ಷಗಳ ಅನುದಾನವನ್ನು ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಮಲ್ಲೇಶ್ವರಂ ಮಾರುಕಟ್ಟೆಯ ಪುನರ್ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.7630 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಮಂಡಿಸಿ ಅನುಮೋದನೆ ಪಡೆಯುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05–05–2010 ರ ಟಿಪ್ಪಣಿ.

**ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು**

**ನಿರ್ಣಯ:– ಮೇಲ್ಕಂಡ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.**

**ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು**

**ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.**

**ನಿರ್ಣಯ:– ಮೇಲ್ಕಂಡ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.**

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜು)

ಮಹಾಪೌರರು